ಅದು ಸ್ನೇಹಿತರಿಗೆ ನನ್ನ ವಿಚಾರಗಳನ್ನು ತಿಳಿಸುವ ಮಾಧ್ಯಮವಾಯಿತು. ವಿಮರ್ಶಕರಿಗೆ ಆಕ್ಷೇಪಿಸಲು ಅದರಲ್ಲಿ ಏನೂ ಸಿಕ್ಕುತ್ತಿರಲಿಲ್ಲ. ವಾಸ್ತವವಾಗಿ 'ಇಂಡಿಯನ್ ಒಪೀನಿಯನ್'ನ ಧ್ವನಿ ಟೀಕಾಕಾರರೂ ಸಹ ತಮ್ಮ ಲೇಖನಿಯನ್ನು ಸಂಯಮದಿಂದ ಉಪಯೋಗಿಸುವಂತೆ ನಿರ್ಬಂಧಪಡಿಸುತ್ತಿದ್ದಿತು. 'ಇಂಡಿಯನ್ ಒಪೀನಿಯನ್' ಇಲ್ಲದಿದ್ದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಬಹುಶಃ ಸತ್ಯಾಗ್ರಹವೇ ಸಾಧ್ಯವಾಗುತ್ತಿರಲಿಲ್ಲ. ಸತ್ಯಾಗ್ರಹದ ನಂಬಲರ್ಹ ವರದಿಗಾಗಿಯೂ, ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ನಿಜವಾದ ಸ್ಥಿತಿಯನ್ನು ತಿಳಿಯುವುದಕ್ಕಾಗಿಯೂ ಓದುಗರು ಈ ಪತ್ರಿಕೆಯನ್ನು ಎದುರು ನೋಡುತ್ತಿದ್ದರು. ಈ ಪತ್ರಿಕೆ ನನಗೆ ಮಾನವ ಸ್ವಭಾವದ ಬೇರೆ ಬೇರೆ ಮಾದರಿಗಳನ್ನೂ, ಛಾಯೆಗಳನ್ನೂ ಅಭ್ಯಸಿಸುವ ಒಂದು ಸಾಧನವಾಯಿತು. ಏಕೆಂದರೆ, ಯಾವಾಗಲೂ ಸಂಪಾದಕರಿಗೂ ವಾಚಕರಿಗೂ ನಡುವೆ ಆತ್ಮೀಯವಾದ ಮತ್ತು ಶುಭ್ರವಾದ ಸಂಬಂಧವನ್ನು ಏರ್ಪಡಿಸುವುದು ನನ್ನ ಗುರಿಯಾಗಿದ್ದಿತು. ವಾಚಕರ ಹೃದಯಾಂತರಾಳದಿಂದ ಹೊರಡುವ ಭಾವಗಳನ್ನೊಳಗೊಂಡ ಪತ್ರಗಳ ಮಳೆ ನನ್ನ ಮೇಲೆ ಸುರಿಯುತ್ತಿದ್ದಿತು. ಅವು ಬರೆದವರ ಮನೋಭಾವಕ್ಕನುಗುಣವಾಗಿ ಮಿತ್ರಭಾವವನ್ನೋ, ಟೀಕೆಯನ್ನೋ, ಕಟುಭಾವವನ್ನೋ ಸೂಚಿಸುತ್ತಿದ್ದವು. ಇವುಗಳನ್ನೆಲ್ಲ ಚೆನ್ನಾಗಿ ಓದಿ, ಅರಗಿಸಿಕೊಂಡು ಪ್ರತ್ಯುತ್ತರವನ್ನು ಕೊಡುವುದು ನನಗೆ ಸೊಗಸಾದ ಶಿಕ್ಷಣವಾಯಿತು. ಈ ಪತ್ರ ವ್ಯವಹಾರದ ಮೂಲಕ ನಮ್ಮ ಜನ ನನ್ನ ಜೊತೆಯಲ್ಲಿ ಗಟ್ಟಿಯಾಗಿ ಆಲೋಚಿಸುತ್ತಿರುವಂತೆ ತೋರಿತು. ಇದರಿಂದ ನನಗೆ ಪತ್ರಕರ್ತನ ಜವಾಬ್ದಾರಿ ಚೆನ್ನಾಗಿ ಅರ್ಥವಾಯಿತು. ಹೀಗೆ ನಾನು ನಮ್ಮ ಜನರ ಮೇಲೆ ಹೊಂದಿದ ಪ್ರಭಾವದಿಂದ ಮುಂದಿನ ಸತ್ಯಾಗ್ರಹ ಸಂಗ್ರಾಮ ಕ್ರಿಯಾಶೀಲವೂ, ಘನತೆಯಿಂದ ಕೂಡಿದುದೂ, ಎದುರಿಸಲು ಸಾಧ್ಯವಾದುದೂ ಆಯಿತು.

'ಇಂಡಿಯನ್ ಒಪೀನಿಯನ್' ಪ್ರಾರಂಭವಾದ ತಿಂಗಳಿನೊಳಗಾಗಿಯೇ ನಾನು ವೃತ್ತಪತ್ರಿಕೆಗಳ ಒಂದೇ ಗುರಿ ಸೇವೆಯಾಗಿರಬೇಕೆಂದು ಅರಿತೆನು. ವೃತ್ತಪತ್ರಿಕೆ ಒಂದು ದೊಡ್ಡಶಕ್ತಿ. ಆದರೆ, ಹತೋಟಿಯಿಲ್ಲದ ನೀರಿನ ಪ್ರವಾಹ ಹಳ್ಳಗಳನ್ನೆಲ್ಲ ಮುಳುಗಿಸಿ ಪೈರನ್ನು ನಾಶಮಾಡುವಂತೆ, ಹಿಡಿತವಿಲ್ಲದ ಲೇಖನಿ ಸಹ ನಾಶಕ್ಕೆ ಸಾಧನವಾಗುತ್ತದೆ. ಹತೋಟಿ ಹೊರಗಿನದಾದರೆ ಅದರಿಂದ ಹತೋಟಿಯಿಲ್ಲದಿರುವುದಕ್ಕಿಂತ ಹೆಚ್ಚು ಅಪಾಯವಾಗುತ್ತದೆ. ಅಂಕುಶ ಒಳಗಿನಿಂದ ಬಂದಾಗ ಮಾತ್ರ ಲಾಭದಾಯಕವಾಗಲ್ಲದು. ಸರಿಯಾಗಿ ನೋಡಿದರೆ, ಪ್ರಪಂಚದಲ್ಲಿ ಎಷ್ಟು ಪತ್ರಿಕೆಗಳು ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಬಲ್ಲವು? ಆದರೆ, ಆ ಪ್ರಯೋಜಕವಾದವುಗಳನ್ನು ಹಿಡಿದೆತ್ತಿ ನಿಲ್ಲಿಸುವವರು ಯಾರು? ಅಪ್ರಯೋಜಕವೆಂದು ತೀರ್ಮಾನಿಸುವವರು ಯಾರು? ಪ್ರಯೋಜನಕರವಾದುವುಗಳೂ, ಅಪ್ರಯೋಜಕವಾದವುಗಳೂ, ಒಳ್ಳೆಯದು ಮತ್ತು ಕೆಟ್ಟದ್ದು ಪ್ರಪಂಚದಲ್ಲಿರುವಂತೆ ಒಟ್ಟಿಗೆಯೇ ಇರುತ್ತವೆ. ಇವುಗಳಲ್ಲಿ ಮನುಷ್ಯ ತನಗೆ ಬೇಕಾದುದನ್ನು ಆರಿಸಿಕೊಳ್ಳಬೇಕು.' (ಕನ್ನಡಕ್ಕೆ: ಗೊರೂರು ರಾಮಸ್ವಾಮಿ ಅಯ್ಯಂಗಾರ್)

## 2

1915ರಲ್ಲಿ ಭಾರತಕ್ಕೆ ಮರಳಿದ ಗಾಂಧೀಜಿ ದೇಶದುದ್ದಕ್ಕೂ ಸುತ್ತಿ ನಿಜ ಭಾರತವನ್ನು ಅರಿಯತೊಡಗಿದರು. ಬ್ರಿಟಿಷರ ವಿರುದ್ಧದ ಮಹಾ ಸಂಗ್ರಾಮಕ್ಕೆ ಅಣಿಯಾಗತೊಡಗಿದ್ದರು. ಹೋರಾಟದ ದಾರಿಯಿನ್ನೂ ಸ್ಪಷ್ಟವಾಗಿರದ ಕಾಲದಲ್ಲಿ ಗಾಂಧೀಜಿ ಮುನ್ನಡೆಸಿದ ಮೂರು ಶಾಂತಿಯುತ ಸತ್ಯಾಗ್ರಹಗಳು ಅವರಿಗೆ ಗುರಿ–ದಾರಿಗಳ ಸ್ಪಷ್ಟ ಕಲ್ಪನೆ ಕೊಟ್ಟವು: ತಮ್ಮ ಜಮೀನಿನ ಮೂರನೇ ಒಂದು ಭಾಗದಲ್ಲಿ ವಾಣಿಜ್ಯ ಬೆಳೆಯಾದ ನೀಲಿಯನ್ನು ಬೆಳೆಯಲೇಬೇಕೆಂಬ ಬ್ರಿಟಿಷ್ ಹೇರಿಕೆಯ ವಿರುದ್ಧ ನಡೆದ ಬಿಹಾರದ ಚಂಪಾರಣ್ ರೈತರ ಸತ್ಯಾಗ್ರಹ (1917), ಬರಗಾಲದಲ್ಲೂ ಕೃಷಿಭೂಮಿಯ ಮೇಲೆ ಕಂದಾಯ ಹೇರಿಕೆ ವಿರುದ್ಧ ಖೇಡಾ ಹೋರಾಟ (1918), ಅಹ್ಮದಾಬಾದ್‌ನಲ್ಲಿ ಗಿರಣಿ ಕಾರ್ಮಿಕರ ಕೂಲಿ ಏರಿಕೆಯ ಪರ ಹೋರಾಟ (1918). ದೇಶದಲ್ಲಿ ಸ್ವಾತಂತ್ರ್ಯ ಚಳವಳಿಯ ಬಿಸಿ ಹಬ್ಬತೊಡಗಿದಂತೆ, ಬ್ರಿಟಿಷರು 'ಡಿಫೆನ್ಸ್ ಆಫ್ ಇಂಡಿಯಾ ಆ್ಯಕ್ಟ್'ಗೆ (1915) ತಿದ್ದುಪಡಿ ಮಾಡಿ, ರಾಜಕೀಯ ಪಕ್ಷಗಳು ಹಾಗೂ ಅಭಿವ್ಯಕ್ತಿ ಸ್ವಾತಂತ್ರವನ್ನು ಹತ್ತಿಕ್ಕಲು ರೌಲತ್